## ಪತ್ತೇದಾರಿಕೆ ಎನ್ನಬಹುದೇ?

'ಪತ್ತೇದಾರಿ ಪ್ರತಿಭಾ' ಒಂದು ವಿಭಿನ್ನ ಧಾರಾವಾಹಿ. ಇಷ್ಟು ದಿನ ಚೆನ್ನಾಗಿ ಮೂಡಿ ಬರುತ್ತಿತ್ತು. ಆದರೆ ಇತ್ತೀಚೆಗೆ ಪ್ರತಿಭಾ ಅಪರಾಧಿ ಯಾರೆಂದು ತಿಳಿಸಲು ಎಲ್ಲರನ್ನೂ ಕರೆದು ಸಾಲಾಗಿ ನಿಲ್ಲಿಸಿ, ಅವರ ಮುಂದೆ ತಾನು ಅಪರಾಧಿಯನ್ನು ಪತ್ತೆ ಮಾಡಿದ್ದು ಹೇಗೆಂದು ದೀರ್ಘವಾದ ವಿವರಣೆಯನ್ನು ಕೊಡುತ್ತಾಳೆ. ಎಲ್ಲರೂ ಪಾಠ ಕೇಳುವ ಸ್ಕೂಲ್ ವಿದ್ಯಾರ್ಥಿಗಳಂತೆ ನಿರ್ಭಾವುಕರಾಗಿ ಕೇಳುತ್ತಾರೆ. ಕೊಲೆಯಾದವರ ಬಂಧುಗಳೂ ಮೇಕಪ್, ಮ್ಯಾಚಿಂಗ್ ಆಭರಣಗಳಿಂದ ಕಂಗೊಳಿಸುತ್ತಾರೆ. ಸ್ವಲ್ಪವೂ ದುಃಖದ ಛಾಯೆ ಕಾಣಿಸುವುದಿಲ್ಲ! ಅಪರಾಧಿಗಳ ಮುಖದಲ್ಲಿ ಗಾಬರಿಯಾಗಲಿ ಅಥವಾ ತಪ್ಪಿಸಿಕೊಂಡು ಓಡಿಹೋಗುವ ಧಾವಂತವಾಗಲಿ ಇಲ್ಲದೇ 'ನಡಿ' ಎನ್ನುವುದಕ್ಕೂ ಮುಂಚೆಯೇ ಸ್ವಇಚ್ಛೆಯಿಂದಲೋ ಎಂಬಂತೆ ಹೋಗುತ್ತಾರೆ! ಹಾಸ್ಯಾಸ್ಪದವಲ್ಲವೇ?

ಇದರ ಬದಲು ಪೊಲೀಸ್ ಅಧಿಕಾರಿಗಳ ಮುಂದೆ ತಾನು ಅಪರಾಧಿಯನ್ನು ಕಂಡುಹಿಡಿದ ಬಗೆಯನ್ನು ವಿವರಿಸಿದರೆ ಹೆಚ್ಚು ಸಮಂಜಸವೆನ್ನಿಸುತ್ತದೆ.

– ಮೀರಾ ವಲ್ಲಭ್, ಬೆಂಗಳೂರು

## ಚಂದನದಲ್ಲಿ ಒಳ್ಳೆಯ ಶುಭೋದಯ

ಚಂದನ ವಾಹಿನಿಯಲ್ಲಿ ಮುಂಜಾನೆ ಪ್ರಸಾರವಾಗುವ 'ಶುಭೋದಯ ಕರ್ನಾಟಕ' ಹಾಗೂ ರಾತ್ರಿ ಅದರ ಸಂಕ್ಷಿಪ್ತ ನೋಟ ನೀಡುವ 'ಹೊರಳು ನೋಟ' ನಿಜಕ್ಕೂ ಒಂದು ಅದ್ಭುತ ಕಾರ್ಯಕ್ರಮ. ಕರ್ನಾಟಕದ ಹಲವಾರು ಕ್ಷೇತ್ರದ ಹೆಸರಾಂತ ದಿಗ್ಗಜರ ಜೀವನದ ಝಲಕ್ ತಿಳಿಯಲು ಒಳ್ಳೆಯ ಅವಕಾಶವಿದು.

ಮಹಿಳಾ ದಿನಾಚರಣೆಯ ದಿನ ಕರ್ನಾಟಕದ ಮುಖ್ಯ ಕಾರ್ಯದರ್ಶಿ ರತ್ನಪ್ರಭ ಅವರೊಡನೆ ನಡೆಸಿದ ಕಾರ್ಯಕ್ರಮ ಚೆನ್ನಾಗಿ ಮೂಡಿಬಂತು. ವಿಶೇಷವಾಗಿ ಹೇಳಬೇಕೆಂದರೆ ರಾಯಚೂರಿನಲ್ಲಿ ದೇವದಾಸಿಯರ ಪುನರ್ವಸತಿ ಬಗ್ಗೆ ಮಾತನಾಡುತ್ತ ಅವರು ಹೇಳಿದ ಒಂದು ಮಾತು 'ದೇವದಾಸಿಯರಿಗೆ ಹೊಲಿಗೆಯಂತ್ರ ಕೊಡಿಸಿದರೆ ಅವರ ಹತ್ತಿರ ಯಾರೂ ಹೊಲಿಸಲು ಬಟ್ಟೆ ಕೊಡುವುದಿಲ್ಲ ಹಾಗೂ ಜಾನುವಾರುಗಳನ್ನು ಕೊಡಿಸಿದರೆ ಯಾರೂ ಹಾಲು ಕೊಳ್ಳುವುದಿಲ್ಲ' ಎಂದು ಹೇಳಿದಾಗ ಸಮಸ್ಯೆಗಳ ತೀವ್ರತೆ ಅರಿವಾಯಿತು. ಇಂತಹ ಒಳ್ಳೆಯ ಕಾರ್ಯಕ್ರಮ ನೀಡುತ್ತಿರುವ ಚಂದನ ವಾಹಿನಿಗೆ ಅಭಿನಂದನೆಗಳು.

–ಮಲ್ಲಿಕಾರ್ಜುನ ಎಂ., ಬೆಂಗಳೂರು

ವಾರದ ಪತ್ರ

## ಕಂಪನಿ ನಾಟಕದ ಕಂಪು

ಮಾ. 4 ರಂದು ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ಕಾಮಿಡಿ ಕಿಲಾಡಿಗಳು' ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬಂತು. ಹಾಸ್ಯ ನಾಟಕಗಳ ಜೊತೆ ಇಡೀ ಕರ್ನಾಟಕದಲ್ಲಿ ಹಾಸ್ಯದ ಹೊನಲನ್ನು ಹರಿಸಿ ಯಶಸ್ಸು ಕಂಡ 'ಕುಂಟ ಕೋಣ ಮೂಕ ಜಾಣ' ನಾಟಕದ ಕೆಲವು ಸನ್ನಿವೇಶಗಳನ್ನು ಶ್ರೀ ವಿಶ್ವಜ್ಯೋತಿ ಪಂಚಾಕ್ಷರಿ ನಾಟ್ಯ ಸಂಘ ಜೇವರ್ಗಿ ಕಂಪನಿಯ ಕಲಾವಿದರು ಪ್ರಸ್ತುತಪಡಿಸಿದರು. ಪ್ರತಿ ಮಾತು, ಸಂಭಾಷಣೆ ಮತ್ತು ಅವರ ಆಂಗಿಕ ಅಭಿನಯ ವೀಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಿತು. ಒಬ್ಬ ಕುರುಡನಿಗೆ ಮೂಕನು ಕೇವಲ ಆಂಗಿಕ ಅಭಿನಯದ ಮೂಲಕ ಕುರುಡನ ಹೆಂಡತಿ ಕುಂಟನ ಜೊತೆ ಹೋಗಿದ್ದನ್ನು ಬಹಳ ನೈಜವಾಗಿ ಕುರುಡನಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸುತ್ತಾನೆ. ಗುಬ್ಬಿ ವೀರಣ್ಣ ಅವರ ಮರಿ ಮೊಮ್ಮಗಳು (ನಾಲ್ಕನೆಯ ತಲೆಮಾರು) ಶ್ವೇತಾ ಬೀಳಗಿ, ಕುರುಡನ ಪಾತ್ರದಲ್ಲಿ ದಯಾನಂದ ಬೀಳಗಿ, ಮೂಕನಾಗಿ ಹರೀಶ ಹಿರಿಯೂರ, ಕುಂಟನಾಗಿ ಮಾರುತಿ ಶೆಟ್ಟಿ ಬಹಳ ನೈಜವಾಗಿ ಅಭಿನಯಿಸಿದರು. ಕಂಪನಿ ನಾಟಕಗಳಿಗೆ ಪ್ರೋತ್ಸಾಹ ನೀಡಲು ವಿನಂತಿಸಿದ ಈ ಕಾಮಿಡಿ ಕಿಲಾಡಿ ಕಾರ್ಯಕ್ರಮದ ಆಯೋಜಕರು ಅಭಿನಂದನೆಗೆ ಅರ್ಹರು.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಬೂಟಾಟಿಕೆಯ ಧಾರಾವಾಹಿ

'ಝೀ' ಟಿವಿಯಲ್ಲಿ ಎರಡು ಧಾರಾವಾಹಿಗಳನ್ನು ನೋಡುತ್ತಿದ್ದೇನೆ. ಅದರಲ್ಲಿ 'ಗಂಗಾ' ಆರಂಭದಲ್ಲಿ ಇಬ್ಬರು ಎಳೆಯ ಮಕ್ಕಳ ಅಭಿನಯದಿಂದಾಗಿ ಖುಷಿ ಕೊಟ್ಟಿತು. ಆದರೆ ಈಗಿನ ಯೌವನದ ಜೋಡಿ, ಅದರಲ್ಲೂ ಗಂಗಾ ಪಾತ್ರಧಾರಿ, ಆ ಎಳೆಯ ಪಾತ್ರಧಾರಿಯ ಅಭಿನಯಕ್ಕೆ ಸಾಟಿಯಾಗುತ್ತಿಲ್ಲ.

'ಬ್ರಹ್ಮ ಗಂಟು'ನ ಆರಂಭದಲ್ಲಿಯೇ ಲಕ್ಕಿ ಮತ್ತು ದೊಡ್ಡಿ ಗೀತಾ ಕೈ ಜೋಡಿಸಿ ನಿಂತು, ನಮ್ಮ ಕುತೂಹಲಕ್ಕೆ ತೆರೆ ಎಳೆಯುತ್ತಿದ್ದಾರೆ. ಲಕ್ಕಿಯ ನಟನೆ ಪೂರಕವಾಗಿದೆ. ಉಳಿದ ಪಾತ್ರಗಳು ಅದರಲ್ಲೂ ಮಂಗಳಾ ಮತ್ತು ಅಜ್ಜಿಯ ಅಭಿನಯ ಮನ ಮುಟ್ಟುವಂತಿದೆ. ಆದರೆ ಮುಖ್ಯ ಪಾತ್ರಧಾರಿ, ದೊಡ್ಡಿ ಗೀತಾಳ ಅಭಿನಯ ಪ್ರಾರಂಭದಲ್ಲಿ ಸ್ವಲ್ಪ ಸಹಜವಾಗಿ ಇದ್ದರೂ, ಕಥೆ ಬೆಳೆಯುತ್ತ ಹೋದಂತೆ ಅಸಹಜವಾಗುತ್ತಿದೆ.

– ಕೆ. ಶ್ರೀಕಲಾ ಉಡುಪ, ಮಂಗಳೂರು

## ದಿಟ್ಟ ಮಹಿಳೆಗೆ ಯಶಸ್ಸು

ಕಲರ್ಸ್ ಕನ್ನಡದ 'ಮನೆ ದೇವ್ರು' ಅಂತ್ಯಗೊಂಡಿದೆ. ಅದರ ಎಲ್ಲಾ ಕಂತುಗಳು ಬಹಳ ಕುತೂಹಲಕಾರಿಯಾಗಿದ್ದವು. ಕಿನ್ನರಿ, ಕುಲವಧು, ಪುಟ್ಟಗೌರಿ ಮದುವೆ, ಲಕ್ಷ್ಮಿ ಬಾರಮ್ಮ, ಅಗ್ನಿಸಾಕ್ಷಿ ಧಾರಾವಾಹಿಗಳು ಕ್ಲೈಮ್ಯಾಕ್ಸ್ ದಾಟಿ ಮುಂದುವರೆಯುತ್ತಾ, ರಬ್ಬರ್‌ನಂತೆ ಎಳೆಯುತ್ತಾ, ನೀರಸವಾಗಿದ್ದರೂ ಮುಂದುವರಿದು ವೀಕ್ಷಕರಿಗೆ ಬೋರ್ ಹೊಡೆಸುತ್ತಿರುವುದನ್ನು ನೋಡಿದರೆ, ಮನೆ ದೇವ್ರು ಧಾರಾವಾಹಿಯ ಪ್ರತಿ ಕಂತು ವೀಕ್ಷಿಸಲು ಅತ್ಯಂತ ಕುತೂಹಲಕಾರಿಯಾಗಿ, ಇನ್ನೂ ವೀಕ್ಷಕರಲ್ಲಿ ನೋಡುವ ಉತ್ಸಾಹವಿದ್ದಾಗಲೇ ಅಚ್ಚುಕಟ್ಟಾಗಿ ಅಂತ್ಯ ಮಾಡಿರುವುದು ಸಂತೋಷವಾಯ್ತು.

ಜಾನಕಿ ಮಾವನ ಕ್ರೂರ ಮನಸ್ಸು ಪರಿವರ್ತನೆ ಮಾಡಬೇಕು, ಅವರ ದಬ್ಬಾಳಿಕೆಗೆ ಅಂತ್ಯ ಹಾಡಬೇಕೆಂದು ಮನೆ ಪ್ರವೇಶಿಸುತ್ತಾಳೆ. ತನಗೆ ಬಂದ ಎಲ್ಲಾ ಕಷ್ಟ ಮತ್ತು ಸಮಸ್ಯೆಗಳನ್ನು ಎದುರಿಸಿ ಕಡೆಗೂ ಮಾವನ ಮನೆ, ಮನಸ್ಸು ಪರಿವರ್ತನೆಗೆ ಮಾಡುವುದರಲ್ಲಿ ಯಶಸ್ವಿಯಾದ ದಿಟ್ಟ ಮಹಿಳೆ. ಅವಳ ದಿಟ್ಟತನದ ನಡೆ ಎಲ್ಲರೂ ಮೆಚ್ಚುವಂಥದ್ದು.

–ವಿಜಯಲಕ್ಷ್ಮಿ, ಬೆಂಗಳೂರು; ಸೀತಾ ಕೇಶವ, ಸಿಡ್ನಿ

## ಎರಡು ಪುಸ್ತಕ ಕೊಡಿ

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸಿ.ವಿ. ರಾಮನ್ ವಿಜ್ಞಾನ ಕ್ವಿಜ್ ನಡೆಸುತ್ತಿರುವುದು ಸಂತೋಷದ ವಿಚಾರ. ಪ್ರತಿ ತಂಡದಲ್ಲಿ ಇಬ್ಬರು ಸ್ಪರ್ಧಿಗಳು ಇದ್ದು ವಿಜೇತರಿಗೆ ಒಂದು ಉತ್ತರಕ್ಕೆ ಒಂದು ಪುಸ್ತಕವನ್ನು ನೀಡುತ್ತಿದ್ದೀರಿ. ಇದು ಸರಿಯಾದ ಕ್ರಮವಲ್ಲ. ಒಂದು ಪುಸ್ತಕವನ್ನು ತಂಡದ ಇಬ್ಬರು ಸ್ಪರ್ಧಿಗಳು ಹಂಚಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಹಾಗಾಗಿ ಒಂದು ಪ್ರಶ್ನೆಗೆ ಎರಡು ಪುಸ್ತಕಗಳನ್ನು ನೀಡಿದರೆ ಇಬ್ಬರೂ ಹಂಚಿಕೊಂಡು ಖುಷಿಪಡುತ್ತಾರೆ. ವ್ಯವಸ್ಥೆ ಬದಲಾಗಲಿ ಎಂಬುದು ನನ್ನ ಅನಿಸಿಕೆ.

–ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಅವಧಿ ವಿಸ್ತರಿಸಿ

ಪಬ್ಲಿಕ್ ಟಿ.ವಿ.ಯ 'ಬಿಗ್ ಬುಲೆಟಿನ್' ಗಮನ ಸೆಳೆಯುವಂತಹ ಕಾರ್ಯಕ್ರಮ. ಚುನಾವಣೆಯ ಸಮಯದಲ್ಲಿ ರಂಗನಾಥ ಅವರ ವಿಶ್ಲೇಷಣೆ, ಉತ್ತರಿಸುವ, ಸಾಮಾನ್ಯ ಜನರಿಗೆ ಅರ್ಥವಾಗುವಂತೆ ತಿಳಿಸುವ ಅವರ ಮಾತಿನ ವೈಖರಿಯನ್ನು ಮೆಚ್ಚಲೇಬೇಕು.

–ಅಂಚೆ ಸುಬ್ರಹ್ಮಣ್ಯ, ಕೊಪ್ಪ